ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

**ಸಿ.ಸಿ.ನಂ.274/2020**

| | | | |
|---|---|---|---|
| ಹೆಸರು | : | ಟಿ ಇ ಮಂಜುನಾಥ | |
| ತಂದೆ ಹೆಸರು | : | ಲೇಟ್ ಈರಯ್ಯ | ಸಿ .ಡಬ್ಲ್ಯೂ :1 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ASI ಗುಬ್ಬಿ ಠಾಣೆ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 03-03-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಕಲಂ **299** ಸಿ ಆರ್ ಪಿ ಸಿ ರಡಿಯಲ್ಲಿ ಸಾಕ್ಷಿಯು ಮುಂದುವರೆದ ವಿಚಾರಣೆ **ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಜುಲೈ 2024 ರಿಂದ ಇಲ್ಲಿಯವರೆಗೆ ಗುಬ್ಬಿ ಪೊಲೀಸ್ ಠಾಣೆಯಲ್ಲಿ ASI ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 22-12-2025 ರಂದು ಈ ನ್ಯಾಯಾಲಯವು ಮಾಡಿದ್ದ ಆದೇಶದ ಪ್ರಕಾರ ದಿಃ 05-01-2026 ರಂದು ಆರೋಪಿ ಶಿವಮಲ್ಲ ಎಸ್ ರವರ ಪತ್ತೆಯ ಬಗ್ಗೆ ಅವರು ವಾಸಿಸುತ್ತಿದ್ದ ಬಾಡಿಗೆ ಮನೆ ನಂ. 52, 3 ನೇ ಕ್ರಾಸ್ , 6 ನೇ ಮೇನ್ , ಲಿಬರ್ಟಿ ಶೋ ರೂಂ ಹತ್ತಿರ , ಶ್ರೀನಿವಾಸ ನಗರ , ಬೆಂಗಳೂರು ಇಲ್ಲಿ ಲಿಬರ್ಟಿ ಶೋ ರೂಂ ಹತ್ತಿರ ಸಾಕ್ಷಿದಾರರಾದ ಸುಮಿತ್ರ ಕೋಂ ಶಿವಲಿಂಗಸ್ವಾಮಿ 42 ವರ್ಷ ಶ್ರೀನಿವಾಸ ನಗರ ಬೆಂಗಳೂರು ಹಾಗೂ ಮಂಜು ಎಂ ಬಿನ್ ಮಾದಯ್ಯ 52 ವರ್ಷ ವಾಸ ಶ್ರೀನಿವಾಸ ನಗರ ಬೆಂಗಳೂರು ರವರ ಸಮಕ್ಷಮ ಬೆಳಗ್ಗೆ 10.30 ರಿಂದ 11.00 ಗಂಟೆಯವರೆಗೆ ಉದ್ಘೋಷಣಾ ಪಂಚನಾಮೆ ಜರುಗಿಸಿರುತ್ತೇನೆ . ಈ ಬಗ್ಗೆ ವರದಿಯನ್ನು ಮತ್ತು ಸಾಕ್ಷಿಗಳ ಸಹಿಗಳನ್ನು ಪಡೆದಿರುತ್ತೇನೆ ಮತ್ತು ಛಾಯಾ ಚಿತ್ರ ತೆಗೆದಿರುತ್ತೇನೆ .

ದಿಃ 06-01-2026 ರಂದು ಗುಬ್ಬಿ ನ್ಯಾಯಾಲಯದ ಆವರಣದಲ್ಲಿ ಸಾಕ್ಷಿದಾರುಗಳಾದ ವಸಂತ ಕುಮಾರ್ ಬಿನ್ ತೋಪಯ್ಯ ವಾಸಃ ಒದಲೂರು ಗ್ರಾಮ ಹಾಗೂ ಕೆಂಪಯ್ಯ ಬಿನ್ ಬೋರಯ್ಯ ವಾಸಃ ಒದಲೂರು ಗ್ರಾಮ ರವರ ಸಮಕ್ಷಮ ಬೆಳಗ್ಗೆ 10.45 ರಿಂದ 11.17 ಯವರೆಗೆ ಉದ್ಘೋಷಣಾ ಪಂಚನಾಮೆ ಜರುಗಿಸಿರುತ್ತೇನೆ . ಈ ಬಗ್ಗೆ ವರದಿಯನ್ನು ಮತ್ತು ಸಾಕ್ಷಿಗಳ ಸಹಿಗಳನ್ನು ಪಡೆದಿರುತ್ತೇನೆ ಮತ್ತು ಛಾಯಾ ಚಿತ್ರ ತೆಗೆದಿರುತ್ತೇನೆ ಮತ್ತು ಪಂಚನಾಮೆಯ ನಕಲನ್ನು ನ್ಯಾಯಾಲಯದ ಹೊರಭಾಗದ ಕಟ್ಟದ ಗೋಡೆಗೆ ಅಂಟಿಸಿರುತ್ತೇನೆ .

ದಿಃ ನಂತರ 05-02-2026 ರಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿ ಗಿರಿನಗರ , ಬೆಂಗಳೂರು ರವರಿಗೆ ಆರೋಪಿತರ

ಸ್ವತ್ತುಗಳ ಬಗ್ಗೆ ವಿವರಗಳನ್ನು ಕೇಳಿ ಅರ್ಜಿ ಸಲ್ಲಿಸಿರುತ್ತೇನೆ . ಸದರಿ ಅರ್ಜಿಗೆ ಪೂರಕವಾಗಿ ದಿಃ 17-02-2026 ರಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿ ಗಿರಿನಗರ , ಬೆಂಗಳೂರು ರವರಿಂದ ವರದಿ ಪಡೆದಿರುತ್ತೇನೆ . ಆ ವರದಿಯಲ್ಲಿ ಆರೋಪಿತರಿಗೆ ಸೇರಿದ ಯಾವುದೇ ಸ್ಥಿರ ಮತ್ತು ಚಾರಾಸ್ಥಿಗಳು ಲಭ್ಯವಿಲ್ಲವೆಂದು ಅವರುಗಳು ಮಾಹಿತಿ ನೀಡಿರುತ್ತಾರೆ . ಸದರಿ ವರದಿಯನ್ನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ .

ಎರಡು ಉದ್ಘೋಷಣಾ ವರದಿಗಳು ಮತ್ತು ಛಾಯಾ ಚಿತ್ರಗಳನ್ನು ಒಟ್ಟಾಗಿ , ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿ ಗಿರಿನಗರ , ಬೆಂಗಳೂರು ರವರಿಗೆ ಸಲ್ಲಿಸಿದ್ದ ನಿವೇದನೆ ಮತ್ತು ಅವರು ನೀಡಿರುವ ಪತ್ರ ಹಾಗೂ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ಎರಡು ವರದಿಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿಸಿ -1 ರಿಂದ 6 ಎಂದು ಸಾಕ್ಷಿಯ ಸಹಿಗಳನ್ನು 1 (ಎ) , 2 (ಎ) , 4 (ಎ) ರಿಂದ 6 (ಎ) ಎಂದು ಗುರುತಿಸಲಾಯಿತು .

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.